(a) YES.

(b) under consideration.

ಶ್ರೀಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದಿದ್ದಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಅದನ್ನು ಪ್ರಾರಂಭ ಮಾಡಬೇಕು ಎನ್ನುವ ಬಗ್ಗೆ ಪರಿಶೀಲನಾ ಹಂತದಲ್ಲಿದೆಯೆಂದು ಹೇಳಿದ್ದಾರೆ. ಆದ್ದರಿಂದ ಮುಂದಿನ ಸಾಲಿನಲ್ಲಾದರೂ ಅದನ್ನು ಮಾಡುವ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಗುಂಡ್ಲುಪೇಟೆ ನಮ್ಮ ನಜೀರ್‌ಸಾಬ್‌ರವರ ಊರು, ಅವರ ನೆನಪಿನಲ್ಲಾದರೂ ಸಹ ಅದನ್ನು ಮಾಡಿಬಿಡಿ. ಈಗ ಪ್ರಶ್ನೋತ್ತರ ವೇಳೆ ಮುಕ್ತಾಯಗೊಳ್ಳುತ್ತದೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಕೊಡಗು ಜಿಲ್ಲಾ ಪಂಚಾಯಿತಿಗೆ ಹಣ ಬಿಡುಗಡೆ

298(709) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ(ಸೋಮವಾರ ಪೇಟೆ):

ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಡಗು ಜಿಲ್ಲಾ ಪಂಚಾಯಿತಿಗೆ 1-4-96 ರಿಂದ 31-1-97ರ ವರೆಗೂ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣವೆಷ್ಟು; (ಪ್ರಾರಾವಾರು ವಿವರಗಳನ್ನು ನೀಡುವುದು)?

ಶ್ರೀ. ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

(ಅ) ರಾಜ್ಯ ಸರ್ಕಾರವು ಕೊಡಗು ಜಿಲ್ಲಾ ಪಂಚಾಯಿತಿಗೆ 1-4-96 ರಿಂದ 31-1-97ರ ವರೆಗೆ ಯೋಜನೆ ಅಡಿಯಲ್ಲಿ ರೂ. 1320.59ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ ರೂ. 2183.47 ಲಕ್ಷಗಳನ್ನು ಬಿಡುಗಡೆ ಮಾಡಿದೆ. (ಪ್ರಾರಾವಾರು ವಿವರಗಳನ್ನು ಲಗತ್ತಿಸಿದೆ).

ಕ್ರ.ಸಂ.	ಪ್ರಧಾನ ಲೆಕ್ಕಶೀರ್ಷಿಕೆ		ಯೋಜನೆ (ರೂ. ಲಕ್ಷಗಳಲ್ಲಿ) ಸರ್ಕಾರದಿಂದ ಬಂದ ಹಣ
1.	2202-01	ಪ್ರಾಥಮಿಕ ಶಿಕ್ಷಣ	63.61
2.	2202-02	ಸೆಕೆಂಡರಿ ಶಿಕ್ಷಣ	47.47
3.	2202-05	ಹಿಂದಿ ಶಿಕ್ಷಕರ ನೇಮಕಾತಿ	0.34
4.	2202-04	ವಯಸ್ಕರ ಶಿಕ್ಷಣ	2.80
5.	2204	ಕ್ರೀಡೆ ಮತ್ತು ಯುವಜನ ಸೇವೆ	17.64